सत्यमेव जयते
Government Of India


ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ

ಜಲಾನಯನ ಅಭಿವೃದ್ಧಿ ಘಟಕ 2.0

(PMKSY-WDC 2.0)



ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕ.ಗೃ.ಮಂ. ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009



ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರಿಂದ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಸವಲತ್ತು ವಿತರಣೆ



ಸನ್ಮಾನ್ಯ ಕೃಷಿಸಚಿವರು ಕರ್ನಾಟಕ ಸರ್ಕಾರ ರವರಿಂದ WDC 2.0 ಕಾರ್ಯಕ್ರಮದ ಉದ್ಘಾಟನೆ

ಗಿರೀಶ್ ಹೆಚ್.ಸಿ, ಭಾ.ಆ.ಸೇ
ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ
ಯೋಜನಾ ನಿರ್ದೇಶಕರು
7ನೇ ಮಹಡಿ, ಕೆ.ಹೆಚ್.ಬಿ ಸಂಕೀರ್ಣ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು–09



ಕರ್ನಾಟಕ ರಾಜ್ಯವು ದೇಶದಲ್ಲೆ ಭೌಗೋಳಿಕವಾಗಿ 8 ನೇ ದೊಡ್ಡ ರಾಜ್ಯವಾಗಿದ್ದು, ರಾಜಸ್ಥಾನದ ನಂತರ ಅತಿ ಹೆಚ್ಚು ಬರಪೀಡಿತ ಪ್ರದೇಶವನ್ನು ಹೊಂದಿರುವ 2ನೇ ಅತಿ ದೊಡ್ಡ ರಾಜ್ಯವಾಗಿದೆ. ಪ್ರಸ್ತುತ ಮಳೆಯಾಶ್ರಿತ ಪ್ರದೇಶದ ಮಣ್ಣು, ನೀರು ಹಾಗೂ ಇತರೆ ನೈಸರ್ಗಿಕ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸುವುದು ಜೊತೆಗೆ ನಿರ್ವಹಣೆ ಮಾಡುವುದು, ರಾಜ್ಯದ ರೈತರ ಆದಾಯವನ್ನು ದ್ವಿಗುಣಗೊಳಿಸುವುದು ಮತ್ತು ರಾಷ್ಟ್ರದ ಜಿ.ಡಿ.ಪಿ ಯಲ್ಲಿ ರಾಜ್ಯದ ಪಾಲನ್ನು ಗಣನೀಯವಾಗಿ ಹೆಚ್ಚಿಸುವುದು ಜಲಾನಯನ ಅಭಿವೃದ್ಧಿ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ.

ಜಲಾನಯನ ಅಭಿವೃದ್ಧಿಯ ಮೂಲ ಆಶಯವು ಸಮುದಾಯದ ಸಹಬಾಗಿತ್ವದೊಂದಿದೆ ದಿಬ್ಬದಿಂದ ಕಣಿವೆಯ ಆಧಾರದಲ್ಲಿ ಮಳೆಯಾಶ್ರಿತ ಜಲಾನಯನ ಪ್ರದೇಶವನ್ನು ಸಮಗ್ರವಾಗಿ, ವೈಜ್ಞಾನಿಕವಾಗಿ ಹಾಗೂ ಜಲಾನಯನದ ವಿಜ್ಞಾನವನ್ನು ಸರಳೀಕರಣಗೊಳಿಸುವ ಮೂಲಕ ಯೋಜನೆಯ ಪಾಲುದಾರರನ್ನು ವ್ಯವಸ್ಥಿತವಾಗಿ ರೈತ ಉತ್ಪಾದಕ ಸಂಸ್ಥೆ ರಚನೆಯ ಮೂಲಕ ಸಂಘಟಿಸಿ, ಜಲಾನಯನ ಯೋಜನಾ ಪ್ರದೇಶದ ಉತ್ಪನ್ನಗಳಿಗೆ ಏಕರೂಪದ ಬ್ರ್ಯಾಂಡಿಂಗ್ ಮೂಲಕ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆ ಹಾಗೂ ಜಲಾನಯನ ಯೋಜನೆಗಳ ಅನುಷ್ಠಾನದ ನಂತರ ಉಪಯುಕ್ತತೆಯ ಹಕ್ಕನ್ನು ಒದಗಿಸುವುದು.

ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೆಕ್ಟೇರ್ ಗಳಿದ್ದು, ಇದರಲ್ಲಿ 129.70 ಲಕ್ಷ ಹೆಕ್ಟೇರ್ ಪ್ರದೇಶವು ಜಲಾನಯನ ಉಪಚಾರಕ್ಕೆ ಲಭ್ಯವಿದೆ. ಇದುವರೆವಿಗೂ 73.25 ಲಕ್ಷ ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸಾಂಪ್ರದಾಯಿಕವಾಗಿ ಉಪಚರಿಸಲಾಗಿದೆ. 5.50 ಲಕ್ಷ ಹೆಕ್ಟೇರ್ ಪ್ರದೇಶ ವಿವಿಧ ಯೋಜನೆಗಳಡಿ ಉಪಚರಿಸಲಾಗುತ್ತಿದೆ. ಉಳಿದ 50.95 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಜಲಾನಯನ ಪ್ರದೇಶವು ವೈಜ್ಞಾನಿಕ ಜಲಾನಯನ ತತ್ವದ ಆಧಾರದ ಮೇಲೆ ಉಪಚಾರಕ್ಕೆ ರಾಜ್ಯದಲ್ಲಿ ಲಭ್ಯವಿದೆ. ದೇಶದಲ್ಲಿನ 260 ಲಕ್ಷ ಹೆಕ್ಟೇರ್ ಪ್ರದೇಶದ ಭೂ ಅವನತಿ ತಟಸ್ಥತೆಯನ್ನು ಸಾಧಿಸಲು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಮೊದಲ ಹೆಜ್ಜೆಯಾಗಿ ಹೊಸ ಪೀಳಿಗೆಯ ಜಲಾನಯನ ಅಭಿವೃದ್ಧಿ ಪರಿಕಲ್ಪನೆಯೊಂದಿಗೆ 2021–22 ನೇ ಸಾಲಿನಿಂದ ದೇಶದ 49.50 ಲಕ್ಷ ಹೆಕ್ಟೇರ್ ಪ್ರದೇಶವನ್ನು ಮೊದಲ ಹಂತದಲ್ಲಿ ಅಭಿವೃದ್ಧಿಪಡಿಸಲಿದೆ. ಉಳಿದ 210.50 ಲಕ್ಷ ಹೆಕ್ಟೇರ್ ಪ್ರದೇಶವನ್ನು ಮುಂದಿನ ವರ್ಷಗಳಲ್ಲಿ ಹಂತ ಹಂತವಾಗಿ PMKSY-WDC 2.0 ಯೋಜನೆಯಡಿ ಉಪಚರಿಸಲು ಯೋಜಿಸಲಾಗಿದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ ಘಟಕ 2.0' (PMKSY- WDC 2.0) ರಡಿ ರಾಜ್ಯದ 62 ಆಯ್ದ ತಾಲೂಕುಗಳಲ್ಲಿ 2.90 ಲಕ್ಷ ಹೆಕ್ಟೇರ್ ಪ್ರದೇಶವನ್ನು ಹೊಸ ಪೀಳಿಗೆಯ ಜಲಾನಯನ ಅಭಿವೃದ್ಧಿ ಯೋಜನೆಯಡಿ ಉಪಚರಿಸಲು ರಾಜ್ಯಕ್ಕೆ ಮೊದಲ ಹಂತದಲ್ಲಿ 62 ಯೋಜನೆಗಳನ್ನು (Projects) ಮಂಜೂರು ಮಾಡಿದೆ. ಈ ಯೋಜನೆಗಳು ಮಳೆಯಾಶ್ರಿತ ರೈತರ ಆದಾಯವನ್ನು ಹೆಚ್ಚಿಸಲು ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ವಹಿಸಲು, ಸ್ಥಳೀಯ ಸಮುದಾಯ ಆಧಾರಿತ ಸಂಘಟನೆಯನ್ನು ಬಲಪಡಿಸಲು,

ರೈತ ಉತ್ಪಾದಕ ಸಂಸ್ಥೆಗಳ (FPO) ರಚನೆ, ಆಸ್ತಿ ರಹಿತರಿಗೆ ಜೀವನೋಪಾಯ ಚಟುವಟಿಕೆಗಳನ್ನು ಒದಗಿಸಲು, ತೋಟಗಾರಿಕೆ ಹಾಗೂ ಅರಣ್ಯೀಕರಣದ ಮೂಲಕ ಹಸಿರು ಹೊದಿಕೆಯನ್ನು ಹೆಚ್ಚಿಸಲು, ಮೇವು, ಇಂಧನ ಮತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಹಾಗೂ ಯೋಜನೆಯ ಪ್ರದೇಶದ ವ್ಯಾಪ್ತಿಯಲ್ಲಿ ರಚಿಸಲಾದ ಸ್ವತ್ತುಗಳ ಸುಸ್ಥಿರತೆಯನ್ನು ಕಾಪಾಡಲು ಈ ಯೋಜನೆಯ ಸಹಕಾರಿಯಾಗಿದೆ. ಒಟ್ಟಾರೆಯಾಗಿ ಯೋಜನೆಯ ಅನುಷ್ಠಾನದಿಂದ ಗ್ರಾಮೀಣ ಭಾಗದ ರೈತರ ಆದಾಯದಲ್ಲಿ ಗಣನೀಯ ಹೆಚ್ಚಳ ಮತ್ತು ಸ್ವಾಭಾವಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸುಸ್ಥಿರತೆಯನ್ನು ಸಾಧಿಸಬಹುದಾಗಿದೆ.

ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅನುಕೂಲಕರವಾಗಲೆಂದು **"ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆಯ ಕಾರ್ಯಚರಣೆ ಕೈಪಿಡಿಯನ್ನು" ಹೊರತರಲಾಗಿದೆ. ಈ ಕಾರ್ಯಚರಣೆ ಕೈಪಿಡಿ** ಕ್ಷೇತ್ರಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ, ಸಮುದಾಯ ಆಧಾರಿತ ಸಂಘಗಳಿಗೆ ಮತ್ತು ಇತರೆ ಯೋಜನೆಯ ಪಾಲುದಾರರಿಗೆ ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ನೆರವಾಗಲಿದೆ. **ಈ ಕಾರ್ಯಚರಣೆ ಕೈಪಿಡಿಯನ್ನು ಹೊರತರಲು ಸಹಕರಿಸಿದ ಕೇಂದ್ರ ಕಛೇರಿಯ ಹಾಗೂ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ಬಯಸುತ್ತೇನೆ.**

ದಿನಾಂಕ: 29–08–2023

(ಗಿರೀಶ್ ಹೆಚ್.ಸಿ, ಭಾ.ಅ.ಸೇ)

ಬಿ. ವೈ. ಶ್ರೀನಿವಾಸ್
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕೆ.ಹೆಚ್.ಬಿ ಸಂಕೀರ್ಣ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು–09



ಜಲಾನಯನ ಅಭಿವೃದ್ಧಿ ವಿಧಾನವು ಮಣ್ಣು ಮತ್ತು ನೀರಿನ ಸಂರಕ್ಷಣೆಯ ಆರಂಭಿಕ ಉದ್ದೇಶಗಳಿಂದ ಪ್ರಾರಂಭವಾಗಿ ಕಾಲಾನಂತರದಲ್ಲಿ ವಿಕಸನಗೊಂಡು ಕ್ರಮೇಣ ನದಿ ಕಣಿವೆಯ ಯೋಜನೆಗಳ ಹೂಳು ತಗ್ಗಿಸುವಿಕೆಯಿಂದ ಜಲಾನಯನ ಪ್ರದೇಶದ ಜೈವಿಕ, ಭೌತಿಕ ಮತ್ತು ಸಾಮಾಜಿಕ ಅಂಶಗಳನ್ನು ನಿರ್ವಹಿಸುವ ಪ್ರಸ್ತುತ ಸಮಗ್ರ ವಿಧಾನವಾಗಿದೆ. 1994 ರಲ್ಲಿ ಅಳವಡಿಸಲಾದ ಸಹಭಾಗಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದ (Participatory Watershed Development Programme) ಮೂಲಕ ದೇಶದಲ್ಲಿ ಮಳೆಯಾಶ್ರಿತ ಮತ್ತು ಕ್ಷೀಣಿಸಿದ ಭೂಮಿಯನ್ನು ಅಭಿವೃದ್ಧಿಪಡಿಸುವುದರ ಹೊರತಾಗಿ ಜೀವನೋಪಾಯವನ್ನು ಭದ್ರಪಡಿಸುವುದು ಒಂದು ಪ್ರಮುಖ ಆಯಾಮವಾಗಿ ಹೊರಹೊಮ್ಮಿದೆ.

ಇದರ ಪರಿಣಾಮವಾಗಿ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಜೀವನೋಪಾಯದ ಚಟುವಟಿಕೆಗಳು ಮತ್ತು ಸುಸ್ಥಿರ ಉತ್ಪಾದನಾ ವ್ಯವಸ್ಥೆಗಳನ್ನು ಗುರಿಯಾಗಿಸಿಕೊಂಡ ಪ್ರಮುಖ ಸಾರ್ವಜನಿಕ ಹೂಡಿಕೆಗಳಿಗೆ ಜಲಾನಯನ ಅಭಿವೃದ್ಧಿ ವಿಧಾನವನ್ನು ಮಾದರಿಯಾಗಿ ಸ್ವೀಕರಿಸಲಾಗಿದೆ. ವಿಶೇಷವಾಗಿ ಭಾರತದಲ್ಲಿ ಮತ್ತು ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ಬಹುಪಾಲು ಜನರು ಕೃಷಿಯ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕಂಡುಬರುವ ಹವಾಮಾನ ಬದಲಾವಣೆಯ ಸಮಸ್ಯೆಗಳು ಮತ್ತು ಅದರ ನೇರ ಪರಿಣಾಮಗಳು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ ಹಾಗೂ ಕೃಷಿ ಉತ್ಪಾದನಾ ವ್ಯವಸ್ಥೆಗಳು, ಸುಸ್ಥಿರ ಜೀವನೋಪಾಯಕ್ಕೆ ಗಂಭೀರ ಸವಾಲುಗಳನ್ನು ಒಡ್ಡಿವೆ.

ಈ ಹಿನ್ನಲೆಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಭೂಸಂಪನ್ಮೂಲ ಇಲಾಖೆಯು 2021–22 ರಿಂದ ರಾಷ್ಟ್ರಾದ್ಯಾಂತ **"ಪ್ರಧಾನ ಮಂತ್ರಿ ಕೃಷಿ ಸಿಂಚಯೀ ಯೋಜನೆ– ಜಲಾನಯನ ಅಭಿವೃದ್ಧಿ ಘಟಕ 2.0" (PMKSY-WDC 2.0)"** ಅನುಷ್ಠಾನಗೊಳಿಸಲು ತಿರ್ಮಾನಿಸಿ, ಕರ್ನಾಟಕ ರಾಜ್ಯಕ್ಕೆ 2.90 ಲಕ್ಷ ಹೆಕ್ಟೇರ್ ಪ್ರದೇಶದ ಗುರಿಯನ್ನು ನಿಗಧಿಪಡಿಸಲಾಗಿದೆ. ಈ ಹೊಸ ಪೀಳಿಗೆಯ ಜಲಾನಯನ ಅಭಿವೃದ್ಧಿಯ ಮೂಲಕ ರಾಜ್ಯದ 30 ಜಿಲ್ಲೆಗಳ 62 ಮಳೆಯಾಶ್ರಿತ ತಾಲೂಕುಗಳ ಆಯ್ದ 62 ಉಪ ಜಲಾನಯನಗಳನ್ನು ಉಪಚರಿಸಲು ಕಾರ್ಯಕ್ರಮವನ್ನು ಮಂಜೂರುಮಾಡಿ, ಕಾರ್ಯಕ್ರಮವು ಈಗಾಗಲೇ ಅನುಷ್ಠಾನದಲ್ಲಿದೆ.

ಈ ಯೋಜನೆಯ ಸಮರ್ಪಕ ಮತ್ತು ಕಾಲಮಿತಿ ಅನುಷ್ಠಾನಕ್ಕೆ ಹೊರತಂದಿರುವ **"ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ– ಜಲಾನಯನ ಅಭಿವೃದ್ಧಿ ಘಟಕ 2.0" (PMKSY-WDC 2.0) ಯೋಜನೆಯ ಕಾರ್ಯಾಚರಣೆ ಕೈಪಿಡಿಯು"** ಕ್ಷೇತ್ರಮಟ್ಟದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮತ್ತು ಯೋಜನೆಯ ಎಲ್ಲಾ ಪಾಲುದಾರರಿಗೆ ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಕಾರ್ಯಚರಣೆ ಕೈಪಿಡಿ ತರಲು ಸಕ್ರಿಯವಾಗಿ ಪಾಲ್ಗೊಂಡ ಜಲಾನಯನ ಅಭಿವೃದ್ಧಿ ಇಲಾಖೆಯ ಕೇಂದ್ರ ಕಛೇರಿಯಮತ್ತು ಇಲಾಖೆಯ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದಿಸುತ್ತೇನೆ.

ದಿನಾಂಕ: 29–08–2023

(ಬಿ.ವೈ. ಶ್ರೀನಿವಾಸ್)



WDC 2.0 ಯೋಜನೆಯಡಿ ಕಿರು ಅರಣ್ಯ (Mini forest) ಅಭಿವೃದ್ಧಿ



ಕಂದಕದೊಂದಿಗೆ ಬದು